


ಪಂಡಿತ ತಾರಾನಾಥ ಸಂಗ್ರಹ ಚಿತ್ರ: ಎನ್‌. ಜಗನ್ನಾಥ್‌ ಪ್ರಕಾಶ್‌

## ಸಮಾಜ ಸುಧಾರಣೆ

20ನೇ ಶತಮಾನದ ಕರ್ನಾಟಕದ ಸಮಾಜಸುಧಾರಣ ಚಳವಳಿಯಲ್ಲಿ ತಾರಾನಾಥರದು ಪ್ರಮುಖ ಸ್ಥಾನ. ವೈಯಕ್ತಿಕವಾಗಿ ಅವರು ಜಾತಿಕಟ್ಟನ್ನು ಮೀರಿ ಜೀವನ ಸಂಗಾತಿಯನ್ನು ವರಿಸಿದವರು. ಅವರ ಅಂತರ್ಜಾತಿ ಮದುವೆಯು ಆ ಕಾಲದಲ್ಲಿ ಕ್ರಾಂತಿಕಾರಕ ಹೆಜ್ಜೆಯಾಗಿತ್ತು. ಸ್ತ್ರೀಸ್ವಾತಂತ್ರ್ಯ ಮತ್ತು ಮಹಿಳೆಯರ ಸಾರ್ವಜನಿಕ ಭಾಗವಹಿಸುವಿಕೆ ಕುರಿತು ಅವರು ಮಾಡಿದ ಚಿಂತನೆ ಮತ್ತು ಪ್ರಯೋಗಗಳನ್ನು, ಈ ಹಿನ್ನೆಲೆಯಿಂದ ಗಮನಿಸಬೇಕು. ಅವರ ಸಾಮಾಜಿಕ ಸುಧಾರಣ ಪ್ರಯೋಗಗಳಿಗೆ ಪ್ರೇಮಾಯತನದ ವಿದ್ಯಾರ್ಥಿನಿಯಾಗಿದ್ದು, ನಂತರ ಅವರ ಮಡದಿಯಾದ ಸುಮತೀಬಾಯಿಯವರ ಬೆಂಬಲವಿತ್ತು. ಸುಮತಿಯವರ ತಂದೆ ಜ್ಞಾನಸಂಬಂಧಂ, ಸಂಸ್ಕೃತ ಪಂಡಿತರೂ ಮದರಾಸು ಹೈಕೋರ್ಟಿನಲ್ಲಿ ವಕೀಲರೂ ಆಗಿದ್ದವರು; ಸ್ವಾತಂತ್ರ್ಯ ಹೋರಾಟದಲ್ಲಿ ಭೂಗತರಾಗಿ ಬರ್ಮಾದಲ್ಲಿದ್ದವರು. ಇಂತಹ ಚಳವಳಿಗಾರ ಕುಟುಂಬದಿಂದ ಬಂದ ಅವರು, ತಾರಾನಾಥರಂತಹ ಬಂಡುಕೋರನಿಗೆ ಒಲಿದಿದ್ದು ಸಹಜವಾಗಿದೆ. ತಾರಾನಾಥರಿಗೆ ಸಾಂಪ್ರದಾಯಿಕ ಸಮಾಜವು ಮಹಿಳೆಯರನ್ನು ದಮನಿಸಿರುವುದರ ಬಗ್ಗೆ ತೀವ್ರತರವಾದ ಆಕ್ರೋಶವಿತ್ತು. ಅವರ ಸ್ತ್ರೀಪರವಾದ ಚಿಂತನೆಗಳು 'ಧರ್ಮಸಂಭವ' (1931) ಕೃತಿಯಲ್ಲಿ ಪ್ರಕಟವಾಗಿವೆ. ಧರ್ಮದ ಹೆಸರಲ್ಲಿ ಸಂಕುಚಿತವಾದ ಸಂಪ್ರದಾಯಗಳು ಸಮಾಜದ ಏಳಿಗೆಯನ್ನು ತಡೆಹಿಡಿದಿವೆ ಎಂಬುದು ಈ